ನಿಯತಕಾಲಿಕೆ, ಕಾದಂಬರಿ, ಡಿಜಿಟಲ್ ಕಾಮಿಕ್ಸ್ ಅಥವಾ ಸ್ಕೆಚಿಂಗ್ ಆಸಕ್ತಿ ಹೊಂದಿದವರಿಗೆ ಇದು ಉತ್ತಮ ಉಡುಗೊರೆ. ಪೋರ್ಟೆಬಲ್ ಫೋಟೊ ಪ್ರಿಂಟರ್ ಸವಿನೆನಪುಗಳಿಗೆ ಜೀವ ತುಂಬಿ ಆ ಕ್ಷಣಗಳನ್ನು ಸೆರೆಹಿಡಿದು ಕೊಡುತ್ತದೆ. ಈ ಚಿಕ್ಕ ಸಾಧನ ಮೊಬೈಲ್ ಫೋನಿಗೂ ಕನೆಕ್ಟ್ ಆಗುತ್ತದೆ. ಇದರಲ್ಲಿ ತಕ್ಷಣವೇ ಫೋಟೊ ಪ್ರಿಂಟ್ ತೆಗೆಯಬಹುದು.

- ಸ್ಕಿನ್ ಕೇರ್ ಸ್ಟಾರ್ಟರ್ ಕಿಟ್: ಕಿಶೋರಿಯರ ಸ್ವಯಂ ಆರೈಕೆಗೆ ಉತ್ತಮ. ಇದರಲ್ಲಿ ಅನೇಕ ಬ್ರಾಂಡ್‌ಗಳು ಚರ್ಮ ತಜ್ಞರಿಂದ ಶಿಫಾರಸ್ಸು ಪಡೆದಿರುತ್ತವೆ. ಇವುಗಳಲ್ಲಿ ಮೈಲ್ಡ್ ಕ್ಲೆನ್ಸರ್, ಮಾಯಿಶ್ಚರೈಸರ್, ಸನ್ ಸ್ಕ್ರೀನ್‌ಗಳೂ ಸೇರುತ್ತವೆ.
- ಪರಿಸರಸ್ನೇಹಿ ಬಟ್ಟೆಗಳು: ಫ್ಯಾಷನ್ ಜೊತೆಗೆ ಪರಿಸರ ಪ್ರೀತಿಯ ಮೌಲ್ಯ ಮತ್ತು ಕಾಳಜಿ ಹೊಂದಿರುವ ತರುಣಿಯರಿಗೆ ಮರುಬಳಕೆಯ ವಸ್ತುಗಳು ಅಥವಾ ಆರ್ಗ್ಯಾನಿಕ್ ಕಾಟನ್ ಬಟ್ಟೆಗಳು ಸೂಕ್ತ ಗಿಫ್ಟ್‌ಗಳಾಗಿವೆ. ಉದಾಹರಣೆಗೆ 'ಎಕೋ ಫ್ರೆಂಡ್ಲಿ ಹೂಡಿಗಳು' ತಲೆ ಹೊದಿಕೆ ಹೊಂದಿರುವ, ಕ್ರೀಡೆಯಂತಹ ಸಂದರ್ಭಗಳಲ್ಲಿ ಧರಿಸುವ ಪರಿಸರಸ್ನೇಹಿ ಸ್ವೆಟ್ ಶರ್ಟ್‌ಗಳಾಗಿವೆ.
  ಸಾವಯವ ಹತ್ತಿ, ಸೆಣಬು, ಬಿದಿರು ಮತ್ತು ಮರುಬಳಕೆಯ ಪಾಲಿಯೆಸ್ಟರ್ ಅನ್ನು ಬಳಸಿ ಸುಸ್ಥಿರವಾಗಿರುವ ಉತ್ತಮ ಹೂಡಿ ಬ್ರ್ಯಾಂಡ್‌ಗಳನ್ನು ಹುಡುಕಿ ಉಡುಗೊರೆ ನೀಡಬಹುದು.
  ಇವು ಸ್ಟೈಲಿಷ್ ಆಗಿರುವುದಲ್ಲದೆ, ಮೊಗ್ಗು ಬಿರಿಯುತ್ತಿರುವ ಮನಸ್ಸುಗಳಲ್ಲಿ ಪರಿಸರದ ಬಗ್ಗೆ ಚಿಗುರುತ್ತಿರುವ ಅರಿವನ್ನು ಬೆಂಬಲಿಸುತ್ತವೆ. ಭವಿಷ್ಯದ ಚಿಂತನೆಗೆ ಕುಮ್ಮಕ್ಕು ನೀಡುತ್ತವೆ.
- ಬ್ಲೂಟೂತ್ ಸೆಲ್ಫಿ ರಿಂಗ್ ಲೈಟ್: ಕಂಟೆಂಟ್ ಸೃಷ್ಟಿಸುವ ಲಲಿತೆಯರಿಗೆ, ವಿಡಿಯೊ ಕಾಲ್, ಸೆಲ್ಫಿ ತೆಗೆದುಕೊಳ್ಳಲು ಇಷ್ಟಪಡುವವರಿಗೆ ಉಪಯುಕ್ತ ಉಡುಗೊರೆಯಾಗಿದೆ. ಚಿಕ್ಕದಾದರೂ ಈ ಲೈಟ್‌ಗಳು ಮೊಬೈಲ್ ಫೋನ್ ಅಥವಾ ಲ್ಯಾಪ್ ಟಾಪ್‌ಗೆ ಕ್ಲಿಪ್ ಆಗುತ್ತವೆ.
- ಬುಲೆಟ್ ಜರ್ನಲ್ ಕಿಟ್: ಇವು ಹೋಂವರ್ಕ್ ಪ್ಲಾನ್ ಮಾಡಲು, ಗುರಿಗಳನ್ನು ನಿಗದಿಪಡಿಸಲು ಮತ್ತು ಸೃಜನಶೀಲರಾಗಲು ಅನುವು ಮಾಡುತ್ತದೆ. ಸ್ವಯಂ ಅನ್ವೇಷಣೆಯ ಮೂಲಕ ಭೂತಕಾಲವನ್ನು ಟ್ರ್ಯಾಕ್ ಮಾಡಲು, ವರ್ತಮಾನವನ್ನು ಸಮರ್ಪಕವಾಗಿ ಸಂಯೋಜಿಸಲು ಬಳಸಬಹುದು. ಸ್ಟಿಕ್ಕರ್ ಪ್ಯಾಕ್ ಮತ್ತು ವರ್ಣಮಯ ಪೆನ್ ಕೂಡಬಹುದು.
- ವೈರ್‌ಲೆಸ್ ಇಯರ್ ಬಡ್ಸ್: ಇವು ಬದಲಾಯಿಸಬಹುದಾದ ಉಪಕರಣಗಳು. ಬಣ್ಣದಲ್ಲಿ ವಿವಿಧ ಆಯ್ಕೆಗಳು ಇದ್ದೇ ಇರುತ್ತವೆ. ಇವು ಸಂಗೀತ ಮಾತ್ರವಲ್ಲದೆ ಆಟಗಳಿಗೂ ಹೇಳಿ ಮಾಡಿಸಿದಂತಹ ಉತ್ತಮ ಗುಣಮಟ್ಟದ ಧ್ವನಿಯೊಂದಿಗೆ ಬರುತ್ತವೆ. ಸಹಜವಾಗಿ ಫೋನ್ ಕರೆಗಳನ್ನೂ ಸ್ವೀಕರಿಸಬಹುದು. ಕೆಲವು ಇನ್‌ಇಯರ್ ಡಿಟೆಕ್ಷನ್ ಮತ್ತು ವಾಯ್ಸ್ ಅಸಿಸ್ಟೆಂಟ್ ಇಂಟಿಗ್ರೇಷನ್ ನಂತಹ ಸ್ಮಾರ್ಟ್ ಫೀಚರ್‌ಗಳನ್ನು ಕೂಡ ಹೊಂದಿವೆ. (ಬಡ್ಸ್ ಕಿವಿಯಲ್ಲಿರುವಾಗ ಆಲಿಸುತ್ತಿದ್ದ ಆಡಿಯೊ, ಅವುಗಳನ್ನು ಹೊರತೆಗೆದಾಗ ಸ್ವಯಂಚಾಲಿತವಾಗಿ ನಿಲ್ಲುತ್ತವೆ. ಪುನಃ ಕಿವಿಗೆ ಹಾಕಿದಾಗ ಸ್ವಯಂಚಾಲಿತವಾಗಿ ಆಡಿಯೊ ಪುನರಾರಂಭವಾಗುತ್ತದೆ).
- ಸೈನ್ಸ್ ಸಬ್‌ಸ್ಕ್ರಿಪ್ಷನ್ ಬಾಕ್ಸ್: ಪ್ರಯೋಗ, ಚಟುವಟಿಕೆ, ವಿಡಿಯೊಗಳನ್ನು ಒಳಗೊಂಡಿರುತ್ತದೆ ಈ ಸಾಧನ. ಪ್ರೌಢಶಾಲೆಯಲ್ಲಿ ಓದುವ ಮಕ್ಕಳಿಗೆ ಅನುಕೂಲ ಆಗುವಂತೆ ವಿನ್ಯಾಸ ಮಾಡಲಾಗಿದೆ. ರಸಾಯನಶಾಸ್ತ್ರದ ಪ್ರಯೋಗಗಳು, ರೊಬೋಟಿಕ್ಸ್ ಸೈನ್ಸ್ ಬಾಕ್ಸ್‌ಗಳು ಜನಪ್ರಿಯವಾಗಿವೆ.
- ಕೋಜಿ ಸ್ಮಾರ್ಟ್ ಬ್ಲಾಂಕೆಟ್: ಇವು ಚಳಿಗಾಲದಲ್ಲಿ ರಿಮೋಟ್ ಅಥವಾ ಸ್ಮಾರ್ಟ್‌ಫೋನಿಗೆ ಅಳವಡಿಸಿಕೊಂಡು ನಮಗೆ ಹಿತ ಅನ್ನಿಸುವಂತೆ ಉಷ್ಣತೆಯನ್ನು ಹೊಂದಿಸಿಕೊಳ್ಳುವ ಕಂಬಳಿ. ಇದನ್ನು ಬೆಚ್ಚಗಿನ ಅಪ್ಪುಗೆಯಂತಹ ಉಡುಗೊರೆ ಎನ್ನಬಹುದು!

(ಸಂಗ್ರಹ )


## ಯುಗಾದಿ ಬಂದರೆ ಪ್ರಬಂಧಗಳಿಗೆ ಸುಗ್ಗಿ ಕಾಲ

# ಸುಧಾ

## ಯುಗಾದಿ ವಿಶೇಷಾಂಕ-2026

ಯುಗಾದಿ ಬಂದರೆ ಪ್ರಬಂಧಗಳಿಗೆ ಸುಗ್ಗಿ ಕಾಲ. 2026ರ 'ಸುಧಾ' ಯುಗಾದಿ ವಿಶೇಷಾಂಕಕ್ಕಾಗಿ ಲಲಿತಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿದೆ. ಸೃಜನಶೀಲ ಲೇಖಕರು ತಮ್ಮ ಚಿಂತನೆಯ ಲಾಲಿತ್ಯಪೂರ್ಣ ಬರಹವನ್ನು ಕಳಿಸಬಹುದು. ವಿಷಯ, ವಸ್ತು, ನಿರೂಪಣೆಯಲ್ಲಿ ಹೊಸತನವನ್ನು ಈ ಸ್ಪರ್ಧೆ ನಿರೀಕ್ಷಿಸುತ್ತದೆ.

| | |
|---|---|
| ಮೊದಲನೇ ಬಹುಮಾನ: | ₹20,000 |
| ಎರಡನೇ ಬಹುಮಾನ: | ₹15,000 |
| ಮೂರನೇ ಬಹುಮಾನ: | ₹10,000 |

- ಪ್ರಬಂಧಗಳು 2000 ಶಬ್ದ ಮೀರದಿರಲಿ.
- ಪ್ರಬಂಧಕ್ಕೆ ನಿರ್ದಿಷ್ಟ ವಸ್ತುವಿನ ಕಟ್ಟುಪಾಡಿಲ್ಲ. ಯಾವ ವಿಷಯದ ಬಗ್ಗೆಯಾದರೂ ಪ್ರಬಂಧ ಬರೆಯಬಹುದು.
- ಸ್ಪರ್ಧೆಗೆ ಕಳುಹಿಸುವ ಪ್ರಬಂಧಗಳು ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಜಾಲತಾಣ, ಸಾಮಾಜಿಕ ಜಾಲತಾಣ ಸೇರಿದಂತೆ ಯಾವುದೇ ಮಾಧ್ಯಮದಲ್ಲಿ ಈ ಮೊದಲು ಪ್ರಕಟಗೊಂಡಿರಬಾರದು.
- ಬರಹದ ಜೊತೆಯಲ್ಲಿ ಪ್ರತ್ಯೇಕ ಹಾಳೆಯಲ್ಲಿ ವಿಳಾಸ, ದೂರವಾಣಿ ಸಂಖ್ಯೆ ಬರೆಯಿರಿ. ಜೊತೆಗೆ ನಿಮ್ಮ ಫೋಟೊ ಕೂಡ ಇರಲಿ.
- ಲಕೋಟೆ ಮೇಲೆ ಅಥವಾ ಇಮೇಲ್‌ನಲ್ಲಿ 'ಯುಗಾದಿ ಪ್ರಬಂಧ ಸ್ಪರ್ಧೆಗೆ' ಎಂದು ನಮೂದಿಸಿ.
- ಬಹುಮಾನಿತ ರಚನೆಗಳನ್ನು ಯಾವಾಗ ಬೇಕಾದರೂ ಯಾವ ಸ್ವರೂಪದಲ್ಲಾದರೂ ಬಳಸುವ ಹಕ್ಕನ್ನು 'ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್' ಕಾದಿರಿಸಿಕೊಂಡಿದೆ.
- 'ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್' ಸಿಬ್ಬಂದಿ ಮತ್ತು ಅವರ ಕುಟುಂಬ ವರ್ಗದವರು ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.
- ನುಡಿ–ಯುನಿಕೋಡ್‌ನಲ್ಲಿ ಪ್ರಬಂಧಗಳನ್ನು ಇ–ಮೇಲ್ ಮಾಡಬಹುದು.

ಕೊನೆಯ ದಿನಾಂಕ
ಡಿಸೆಂಬರ್ 25, 2025

ವಿಳಾಸ: ಸಂಪಾದಕರು,
ಸುಧಾ ಯುಗಾದಿ ವಿಶೇಷಾಂಕ,
ನಂ. 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು 560001

ಇ–ಮೇಲ್: ugadi@sudha.co.in